ಸಿ. ಸಿ. ನಂ.- **286/2024**

ಸಿ.ಡಬ್ಲ್ಯೂ- **01** / ಪಿ.ಡಬ್ಲ್ಯೂ- **01**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ **20-03-2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಜೆ ಎಸ್ ಚನ್ನವೀರಪ್ಪ |
| ತಂದೆಯ ಹೆಸರು - | ಶರಣಬಸಪ್ಪ |
| ವಯಸ್ಸು - | **65** ವರ್ಷಗಳು |
| ಉದ್ಯೋಗ - | ಮಠದಲ್ಲಿ ಸೇವೆ |
| ವಾಸಸ್ಥಳ - | ಅನಂತಶಯನ ಗುಡಿ, ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಮೃತ ಅಶ್ವಿನ್ ಕುಮಾರ ನನಗೆ ಪರಿಚಯ. ಅವರು ನಮ್ಮ ಮಠದಲ್ಲಿಯೆ ಇದ್ದರು. ದಿಃ **27.12.2024** ರಂದು ನಾನು ಮತ್ತು ಮೃತ ಅಶ್ವಿನ್ ಕುಮಾರ ಮೊ.ಸೈ ರಲ್ಲಿ ಕೊಂಡನಾಯ್ಕನಹಳ್ಳಿಯಿಂದ ಶ್ರೀಖರಿ ಕಾಲೇಜ್ ಮುಂದೆ ಇರುವ ಮಠಕ್ಕೆ ಹೋಗುತ್ತಿದ್ದಾಗ ರಾತ್ರಿ **7.00** ಗಂಟೆಗೆ ಅದೇ ದಾರಿಯಲ್ಲಿ ಅನಂತಶಯನಗುಡಿ ಕಡೆಯಿಂದ ಒಂದು ದ್ವಿಚಕ್ರ ವಾಹನದಲ್ಲಿ ಇಬ್ಬರು ಸೋಲಾಪುರದ ಹುಡುಗರು ಸುಮಾರು **80-90** ಕಿ.ಮೀಟರ್ ಪ್ರತಿ ಗಂಟೆ ವೇಗದಲ್ಲಿ ಬಂದು ನಮ್ಮ ಮೊ.ಸೈ ಗೆ ಡಿಕ್ಕಿ ಪಡೆಸಿದರು. ಆಗ ಎರಡೂ ಮೊ.ಸೈ ಬಿದ್ದವು. ನಾವೆಲ್ಲರೂ ಒಂದು ಒಂದು ಕಡೆ ಬಿದ್ದೆವು. ಅಶ್ವಿನ್ ಕುಮಾರ ರವರ ಕಾಲು ಮುರಿದಿತ್ತು. ಆತನ ತಲೆಗೆ ಪೆಟ್ಟು ಆಗಿತ್ತು. ನನಗೆ ಎದೆಯ ಬಳಿ ಮತ್ತು ಗಂಟಲಿನ ಬಳಿ ಪೆಟ್ಟಾಗಿತ್ತು. ಸೋಲಾಪುರದ ಹುಡುಗರಿಗೆ ಕೈ ಕಾಲು ಮುರಿದಿತ್ತು. ನಂತರ ಅಶ್ವಿನ್ ಕುಮಾರ ರವರನ್ನು ಅಂಬ್ಯೂಲೇನ್ಸ್ ನಲ್ಲಿ ಬಳ್ಳಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮರುದಿನ ಬೆಳಿಗ್ಗೆ **6.00** ಗಂಟೆಗೆ ಅಶ್ವಿನ್ ಕುಮಾರ ಮರಣ ಹೊಂದಿದರು. ಈ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ **1** ಎಂದು ಸಾಕ್ಷಿಯ ಸಹಿಯನ್ನು ನಿಪಿ **1** ಎ ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪೋಲಿಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿದರು. ಪಂಚನಾಮೆಯನ್ನು ನಿಪಿ **2** ಎಂದು ಸಾಕ್ಷಿಯ ಸಹಿಯನ್ನು ನಿಪಿ **2** ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೋಲಿಸರು ನಕಾಶೆಯನ್ನು ತಯಾರಿಸಿದರು. ಸದರಿ ನಕಾಶೆಯನ್ನು ನಿಪಿ **3** ಎಂದು ಸಾಕ್ಷಿಯ ಸಹಿಯನ್ನು ನಿಪಿ **3** ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೋಟೊ ತೆಗೆದರು. ಸಾಕ್ಷಿ ಗುರುತಿಸಿದ ಪೋಟೊವನ್ನು ನಿಪಿ **4** ಎಂದು ಗುರುತಿಸಲಾಯಿತು. ವಾಹನದ ಜೊತೆ ಪೋಲಿಸ

ಠಾಣೆಯಲ್ಲಿ ಫೋಟೊ ತೆಗೆದರು. ಸದರಿ ಫೋಟೊವನ್ನು ನಿಪಿ 5 ಎಂದು ಗುರುತಿಸಲಾಯಿತು. ಅಲ್ಲಿ ವಾಹನಗಳನ್ನು ಜಪ್ತು ಮಾಡಿದರು. ವಾಹನ ನಂಬರ ನನಗೆ ನೆನಪಿಲ್ಲ. ನಮಗೆ ಬಂದು ಡಿಕ್ಕಿ ಪಡಿಸಿದ ಮೊ.ಸೈ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಗೈರು ಹಾಜರಿದ್ದು ಅವರನ್ನು ನೋಡಿದಲ್ಲಿ ಗುರುತಿಸುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಅವರ ಗುರುತಿಗಾಗಿ ಅವರ ಪರ ವಕೀಲರು ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಪಾಟೀಸವಾಲು- ಆರೋಪಿತರ ಪರ ವಕೀಲರಿಂದ-

ಘಟನೆಯ ದಿನ ನಾವು ಮದ್ಯಾಹ್ನ 3.00 ಗಂಟೆಗೆ ಕೊಂಡನಾಯ್ಕನಹಳ್ಳಿಗೆ ಸಮಾನುಗಳನ್ನು ತರಲು ಹೋಗಿದ್ದೆವು. ಸಂಜೆ 7.00 ಗಂಟೆಯವರೆಗೆ ನಾವು ಅಲ್ಲಿಯೆ ಇದ್ದೆವು. ಹೋಗುವಾಗ ನಾನು ಒಬ್ಬನೇ ಹೋಗಿದ್ದೆನು. ಅಶ್ವಿನಕುಮಾರ ಸುಮಾರು 6.30 ಗಂಟೆಗೆ ನನ್ನ ಬಳಿ ಬಂದರು. ಅವರು ಒಬ್ಬ ಸ್ವಾಮಿಯ ವಾಹನವನ್ನು ತಂದಿದ್ದರು. ಸದರಿ ಸ್ವಾಮಿಯ ಹೆಸರು ವಿಳಾಸ ಗೊತ್ತಿಲ್ಲ. ಅನಂತಶಯನಗುಡಿಯಿಂದ ಕೊಂಡನಾಯ್ಕುನ ರಸ್ತೆ ಜನದಟ್ಟಣೆಯಿಂದ ಕೂಡಿದ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಬನ್ನಿ ಮಹಾಕಾಳಿ ದೇವಸ್ಥಾನ ಇದ್ದು ಒಂದು ತಿರುವು ಇದೆ ಎಂದರೆ ಸರಿ. ನಂತರ ರೈಸ್ ಮಿಲ್ ಮತ್ತು ಸ್ಮಶಾನ ಇದ್ದು ಅಲ್ಲಿ ತಿರುವು ಇದೆ ಎಂದರೆ ಸರಿ. ಅಲ್ಲಿ ವಾಹನಗಳು ನಿಧಾನವಾಗಿ ಬರುತ್ತವೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಸಾಯಿಬಾಬಾ ಗುಡಿಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಅಲ್ಲಿ ವೇಗ ತಡೆ ಇದೆ ಎಂದರೆ ಸರಿ. ಸಾಕ್ಷಿ ಸ್ವಇಚ್ಛೆಯಿಂದ ಘಟನೆಯ ಸಮಯದಲ್ಲಿ ವೇಗ ತಡೆ ತೆಗೆದಿದ್ದರು ಎಂದು ನುಡಿಯುತ್ತಾರೆ. ನಾವು ರಸ್ತೆಯ ಬಲಗಡೆಯಿಂದ ಬರುತ್ತಿದ್ದೆವು ಎಂದರೆ ಸರಿ. ಆರೋಪಿಯು ರಸ್ತೆಯ ಎಡಗಡೆ ಹೋಗುತ್ತಿದ್ದನು ಎಂದರೆ ಸರಿ. ನಿಪಿ 4 ರಲ್ಲಿ ನಾವು ನಿಂತಿರುವ ಜಾಗ ಹೊಸಪೇಟೆ ಕಡೆಯಿಂದ ಪೂರ್ವಕ್ಕೆ ಹೋಗುವ ದಾರಿ ಎಂದರೆ ಸರಿ. ನಾವು ಕೊಂಡನಾಯ್ಕುನಹಳ್ಳಿ ಕಡೆಗೆ ಹೋಗುವ ರಸ್ತೆಯ ಕಡೆ ಮುಖ ಮಾಡಿ ನಿಂತಿರುತ್ತೇವೆ ಎಂದರೆ ಸರಿ. ನಿಪಿ 4 ರ ಫೋಟೊ ವನ್ನು ಪಂಚನಾಮೆ ಮಾಡುವ ಕಾಲಕ್ಕೆ ತೆಗೆದರು. ನಾನು ಪೋಲಿಸ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ.

ಸಿ. ಸಿ. ನಂ.- **286/2024**

ಸಿ.ಡಬ್ಲ್ಯೂ.- **01** / ಪಿ.ಡಬ್ಲ್ಯೂ.- **01**

**2.** ದೂರನ್ನು ಬರೆಯಲು ಎಎಸ್‌ಐ ರವರು ಮಾಹಿತಿಯನ್ನು ಕೊಟ್ಟರು. ಅಪಘಾತದ ನಂತರ ನಾನು ಆಸ್ಪತ್ರೆಗೆ ದಾಖಲು ಆಗಿರಲಿಲ್ಲ. ಅಶ್ವಿನಕುಮಾರ ರವರಿಗೆ ವಾಹನ ಚಾಲನೆ ಪರವಾನಿಗೆ ಇರಲಿಲ್ಲ ಎಂದರೆ ಸರಿ. ಘಟನೆಯ ದಿನ ಅಶ್ವಿನಕುಮಾರ ರವರೇ ವಾಹನವನ್ನು ಜೋರಾಗಿ ಚಲಾಯಿಸಿಕೊಂಡು ಬಂದು ರಸ್ತೆಯ ಕ್ರಾಸ್ ಮಾಡಿ ಆರೋಪಿಯ ವಾಹನಕ್ಕೆ ಡಿಕ್ಕಿ ಪಡೆಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವು ಅಶ್ವಿನಕುಮಾರ ರವರ ಅಜಾಗ್ರಕತೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ತನ್ನ ತಪ್ಪಿನಿಂದ ಅಶ್ವಿನಕುಮಾರ ಅಪಘಾತ ಮಾಡಿಕೊಂಡು ಮರಣಹೊಂದಿರುತ್ತಾರೆ ಎಂದರೆ ಸರಿಯಲ್ಲ. ಘಟನೆಯ ದಿನ ಮುಖ್ಯ ಮಂತ್ರಿಗಳು ಬರುತ್ತಿದ್ದ ಕಾರಣ ರಸ್ತೆಯ ಮೇಲೆ ಎಲ್ಲಾ ವಾಹನಗಳು ನಿಧಾನವಾಗಿ ಹೋಗುತ್ತಿದ್ದವು ಎಂದರೆ ಸರಿಯಲ್ಲ. ನಾನು ಎಷ್ಟು ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಎಲ್ಲಾ ದಾಖಲೆಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಕೆಲವೊಂದು ದಾಖಲೆಗೆ ಘಟನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ನಾನು ಪ್ರಥಮ ಪಿಯುಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ **1** ರ ದೂರನ್ನು ನಾನು ಓದಿ ಸಹಿ ಮಾಡಿರುತ್ತೇನೆ ಎಂದರೆ ಸರಿ.

**3.** ಅಶ್ವಿನ ಕುಮಾರ ರವರು ಮರಣಕ್ಕೆ ವಿಮೆ ಪಡೆಯಲು ಸುಳ್ಳು ದೂರು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಶ್ವಿನಕುಮಾರ ರವರು ರಾಂಗ್ ರೂಟ್ ನಲ್ಲಿ ಬಂದು ಆರೋಪಿಯ ವಾಹನಕ್ಕೆ ಡಿಕ್ಕಿ ಪಡೆಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಅಶ್ವಿನಕುಮಾರ ರವರ ಸಂಬಂಧಿಕರಿಗೆ ತಿಳಿಸಿದ್ದೆವು. ನನಗೆ ಎಲ್ಲಾ ವಿಚಾರ ಗೊತ್ತಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.